ಶ್ರೀ ಹೆಚ್.ಪಿ. ಬಾಲಕೃಷ್ಣ:- ಜಾಗವನ್ನು ಕೊಡಿಸುತ್ತೇವೆ. ಕೊಟ್ಟ ತಕ್ಷಣ ಪ್ರಾರಂಭ ಮಾಡುತ್ತೀರಾ?

ಶ್ರೀ ಹೆಚ್. ನಾಗಪ್ಪ:- ಹೌದು, ಮಾಡುತ್ತೇವೆ.

ಶಿವಮೊಗ್ಗ ತಾಲ್ಲೂಕಿನಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮನೆಗಳ ಹಂಚಿಕೆ

51(212) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಾಣವಾಗಿ ಹಂಚಿಕೆಯಾಗದೇ ಉಳಿದಿರುವ ಮನೆಗಳೆಷ್ಟು; ಹಾಗೂ ವಿತರಣೆ ಮಾಡದಿರಲು ಕಾರಣಗಳೇನು?

ಆ) ಶಿವಮೊಗ್ಗ ತಾಲ್ಲೂಕಿನಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಾಣವಾದ ಮನೆಗಳೆಷ್ಟು; ಅವುಗಳು ಹಂಚಿಕೆಯಾಗದಿರಲು ಕಾರಣವೇನು; ಅವುಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು?

ಅ) ರಾಜ್ಯದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ವತಿಯಿಂದ ಫೆಬ್ರವರಿ 98 ರವರೆಗೆ 19827 ಮನೆಗಳನ್ನು ನಿರ್ಮಿಸಲಾಗಿದ್ದು, 13144 ಮನೆಗಳನ್ನು ಈಗಾಗಲೇ ಅರ್ಹ ಫಲಾನುಭವಿಗಳಿಗೆ ಹಂಚಲಾಗಿರುತ್ತದೆ. ಉಳಿದ 6683 ಮನೆಗಳ ಪೈಕಿ 3620 ಮನೆಗಳಿಗೆ ವಿದ್ಯುಚ್ಛಕ್ತಿ, ಒಳಚರಂಡಿ ಮತ್ತಿತರ ಸಣ್ಣಪುಟ್ಟ ಕೆಲಸಗಳು ಆಗಬೇಕಾಗಿದ್ದು, ಈ ಕೆಲಸಗಳನ್ನು ಈಗಾಗಲೇ ಮಾಡಲಾಗುತ್ತಿದೆ. ಈ ಕೆಲಸಗಳು ಮುಗಿದ ನಂತರ ಹಂಚಿಕೆಯ ಕ್ರಮ ಕೈಗೊಳ್ಳಲಾಗುವುದು. ಇನ್ನುಳಿದ 3063 ಮನೆಗಳನ್ನು ಹಂಚಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) ಶಿವಮೊಗ್ಗ ನಗರದಲ್ಲಿ ಮಂಡಳಿ ವತಿಯಿಂದ 143 ಮನೆಗಳನ್ನು ಈ ಕೆಳಕಂಡ ಕೊಳಚೆ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ.

1.	ಊರ್ಗದೂರಿನಲ್ಲಿ	-	58
2.	ನಾಗೇಂದ್ರ ಕಾಲೋನಿಯಲ್ಲಿ	-	37
3.	ಕಲ್ಲಹಳ್ಳಿಯಲ್ಲಿ	-	48

ಈ ಪೈಕಿ ಊರ್ಗದೂರಿನ 58 ಮನೆಗಳು ಹಾಗೂ ನಾಗೇಂದ್ರ ಕಾಲೋನಿ ಕೊಳಚೆ ಪ್ರದೇಶದ 37 ಮನೆಗಳನ್ನು ಈಗಾಗಲೇ ನೈಜ ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ. ಕಲ್ಲಹಳ್ಳಿಯ 48 ಮನೆಗಳ ಪೈಕಿ 1 ಮನೆಯನ್ನು ಈಗಾಗಲೇ ಹಂಚಿಕೆ ಮಾಡಲಾಗಿದ್ದು, ಉಳಿದ 47 ಮನೆಗಳನ್ನು ಹಂಚಿಕೆ ಮಾಡಲು ಮಂಡಳಿಯು ದಿನಾಂಕ:21-10-97 ರ ಸಭೆಯಲ್ಲಿ ನಿರ್ಣಯ ಮಾಡಿದ್ದು ಮನೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಫೆಬ್ರುವರಿ-1998ರ ವರೆಗೆ 19, 827 ಮನೆಗಳನ್ನು ರಾಜ್ಯದಲ್ಲಿ ನಿರ್ಮಾಣ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇದರಲ್ಲಿ 13,144 ಮನೆಗಳನ್ನು ಹಂಚಲಾಗಿದೆ. ಉಳಿದಿರುವ 6683 ಮನೆಗಳಲ್ಲಿ 3320 ಮನೆಗಳು ವಿದ್ಯುತ್, ಒಳಚರಂಡಿ ವ್ಯವಸ್ಥೆ ಮುಂತಾದ ಸಣ್ಣ ಪುಟ್ಟ ಕೆಲಸಗಳು ಆಗಬೇಕಾಗಿದೆ, ಈಗಾಗಲೇ ಅವುಗಳನ್ನು ಮಾಡಲಾಗುತ್ತದೆ ಎಂದು ಹೇಳುತ್ತಿದ್ದಾರೆ. ಇದು ಏನಾಗುತ್ತದೆ ಎಂದರೆ ಕೊಳಚೆ ನಿರ್ಮೂಲನಾ ಮಂಡಳಿಗೆ ಸರ್ಕಾರದವರು ಹಣ ಬಿಡುಗಡೆ ಮಾಡುತ್ತದೆ. ಇಲ್ಲಿ ತುಂಬಾ ನಿಧಾನವಾಗಿ ಕೆಲಸಗಳು ಆಗುತ್ತವೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ 1994ರಲ್ಲಿ ಕೊಟ್ಟಿರುವ ಮನೆಗಳನ್ನು ಕಳೆದ ವಾರದಲ್ಲಿ ಅಂದರೆ ಸುಮಾರು ನಾಲ್ಕು ವರ್ಷಗಳ ನಂತರ ಈ ಪಟ್ಟಿ ಬಿಡುಗಡೆ ಮಾಡಿದ್ದಾರೆ. ಹೀಗಾಗಿ ಕೊಳಚೆ ಪ್ರದೇಶದ ಬಡವರಿಗೆ ಇದರಿಂದ ತುಂಬಾ ಅನ್ಯಾಯವಾಗುತ್ತಿದೆ. ಅದ್ದರಿಂದ ನನ್ನ ಮೊದಲನೆಯ ಪ್ರಶ್ನೆ ಏನೆಂದರೆ ಇಡೀ ರಾಜ್ಯದಲ್ಲಿ ಈಗಾಗಲೇ ರೆಡಿಯಾಗಿರುವ ಮನೆಗಳನ್ನು ವಿತರಣೆ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ? ಎರಡನೆಯದಾಗಿ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಈ ಕೊಳಚೆ ನಿರ್ಮೂಲನಾ ಮಂಡಳಿಗೆ ಇಟ್ಟಿರುವ ಶೇಕಡಾವಾರು ಹಣವೆಷ್ಟು? ಈ ಹಣವನ್ನು ಇಟ್ಟಿದ್ದೀರೋ ಎಷ್ಟು ಖರ್ಚು ಮಾಡಿದ್ದೀರಿ? ಈ ವಿಷಯವನ್ನು ನಾನು ತಮ್ಮಲ್ಲಿ ಕೇಳಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:- 19,827 ಮನೆಗಳ ಪೈಕಿ ಈಗಾಗಲೇ 13,144 ಮನೆಗಳನ್ನು ಮಾಡಿದ್ದೇವೆ. ಬಾಕಿ ಉಳಿದಿರುವ 6,683 ಮನೆಗಳನ್ನು ಯಾವಾಗ ಕೊಡುತ್ತೀರಿ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. 3620 ಮನೆಗಳು ಈಗಾಗಲೇ ರೆಡಿಯಾಗಿವೆ. ಆದರಲ್ಲಿ ಕೆಲವು ವಿದ್ಯುತ್, ಒಳಚರಂಡಿ ವ್ಯವಸ್ಥೆ ಮುಂತಾದ ಸಣ್ಣ ಪುಟ್ಟ ಕೆಲಸ ಆಗಬೇಕಾಗಿದೆ. ಇದನ್ನು ಕನಿಷ್ಟ ಮೂರು ತಿಂಗಳಲ್ಲಿ ಮಾಡಿಸಿ ಫಲಾನುಭವಿಗಳಿಗೆ ವಿತರಣೆ ಮಾಡುತ್ತೇವೆ. ಅದರ ಜೊತೆಗೆ 3063 ಮನೆಗಳು ರೆಡಿಯಾಗಿದ್ದು, ಅದನ್ನು ಮೂರು ತಿಂಗಳ ಒಳಗೆ ಸಂಬಂಧಪಟ್ಟ ಫಲಾನುಭವಿಗಳಿಗೆ ವಿತರಣೆ ಮಾಡುತ್ತೇವೆ. ಕೇಂದ್ರ ಸರ್ಕಾರದಿಂದ ಈಗಾಗಲೇ ಸುಮಾರು ಒಂಭತ್ತು ಕೋಟಿ ಹಣ ಬಂದಿದೆ. ಅದಕ್ಕೆ 6 ಲಕ್ಷದ 75 ಸಾವಿರ ರೂ. ಗಳ ಒಂದು ಯೋಜನೆ ತಯಾರು ಮಾಡಿ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕೊಡಲಾಗಿದೆ. ಈಗಾಗಲೇ ಕೆಲಸ ಪ್ರಾರಂಭವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಐದು ಐಕರೆ ಜಮೀನು ಈ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಮಂಜೂರಾಗಿ ಈಗಾಗಲೇ ಎರಡು ವರ್ಷವಾಗಿದೆ. ಅದರಲ್ಲಿ ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಮಂಡಳಿಯವರು ಹೇಳುತ್ತಿದ್ದಾರೆ. ಐದು ಎಕರೆ ಜಮೀನನ್ನು ಬಳಸಿಕೊಂಡಿದ್ದೀರಾ? ಎಷ್ಟು ಮನೆಗಳನ್ನು ಕಟ್ಟಬೇಕೆಂದು ಸರ್ಕಾರ ಏನಾದರೂ ಯೋಜನೆಗಳನ್ನು ರೂಪಿಸಿದೆಯೇ? ರೂಪಿಸಿದ್ದರೆ ಯಾವಾಗ ಪ್ರಾರಂಭಿಸುತ್ತೀರಿ? ಯಾವಾಗ ಮುಗಿಸುತ್ತೀರಿ?

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಸದಸ್ಯರು ಕೇಳಿರುವ ಮಾಹಿತಿ ಸಧ್ಯಕ್ಕೆ ನನ್ನ ಹತ್ತಿರ ಇಲ್ಲ. ನಂತರ ಅದನ್ನು ಪೂರ್ಣವಾಗಿ ತರಿಸಿಕೊಂಡು ಪ್ರಾಮಾಣಿಕವಾಗಿ ವಿಚಾರಿಸಿ ಮಾಡಿಕೊಡುತ್ತೇವೆ.

ಅಧ್ಯಕ್ಷರು:- ಅವರದು ಏನಾದರೂ ಡಿಮ್ಯಾಂಡ್ ಇದ್ದರೆ ಅದರ ಬಗ್ಗೆ ಚರ್ಚೆ ಮಾಡಿ, ಮಾಡಿಕೊಡಿ. ಅವರಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು:- ಪಾಟೀಲ್‌ರೆ, ನಿಮ್ಮ ಪ್ರಶ್ನೆಗೆ ಸಮಯ ಕೇಳಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್:- ನನ್ನ ಪ್ರಶ್ನೆ ಬಹಳ ಸರಳವಿದೆ ಸಮಯ ಏಕೆ ಕೇಳಿದ್ದಾರೆ. ಇದು ನನಗೆ ಗೊತ್ತಿಲ್ಲ. ಎಪಿಎಂಸಿ ಅಧ್ಯಕ್ಷ:ಉಪಾಧ್ಯಕ್ಷರ ಚುನಾವಣೆ ಯಾವಾಗ ಮಾಡುತ್ತೀರಿ ಎಂದು ಕೇಳಿದ್ದೇನೆ. ದಿನಾಂಕ:31-3-98ರ ಒಳಗೆ ಚುನಾವಣೆ ಮಾಡಬೇಕೆಂದು ಹೈಕೋರ್ಟಿನ ಡಿವಿಜನಲ್ ಬೆಂಚ್‌ನ ಡೈರೆಕ್ಷನ್ ಇದೆ. ಹೀಗಿದ್ದರೂ ನೀವು ಮಾಡಲಿಲ್ಲ. ಇನ್ನು ಮಂದೆ ಹಾಕುತ್ತೇವೆ ಎಂದರೆ. ಮೆಂಬರ್ಸ್ ಎಲೆಕ್ಟ್ ಆಗಿ ಈಗಾಗಲೇ 11 ತಿಂಗಳು ಕಳೆದು ಹೋಯಿತು. ಇನ್ನೂ ಮುಂದೆ ಹಾಕುತ್ತೇವೆ ಎಂದರೆ ಹೇಗೆ? ನೀವು ಏನು ಚುನಾವಣೆ ಮಾಡುತ್ತಿರೋ ಇಲ್ಲವೊ ಹೇಳಿಬಿಡಿ. ಇಲ್ಲ ಎಂದರೆ ಕೇವಲ ಅಧಿಕಾರಿಗಳ ಮುಖಾಂತರ ಆಡಳಿತ ಮಾಡುತ್ತಿರೋ? There is a direction from the Division Bench.

MR. SPEAKER- Let me see what the Hon'ble Minister says.

ಶ್ರೀ ಹೆಚ್. ನಾಗಪ್ಪ:- ಸಮಯಕ ಕೇಳಿದ್ದುದು ಏಕೆಂದರೆ ಈಗಾಗಲೇ ಲ್ಯಾಪ್ಸ್ ಆಗಿರುವುದರಿಂದ ಇದರ ಬಗ್ಗೆ ಏನು ಮಾಡಬೇಕೆಂದು ಲಾ-ಡಿಪಾರ್ಟ್‌ಮೆಂಟ್ ಜೊತೆಯಲ್ಲಿ ಸಮಾಲೋಚನೆ ನಡೆಸುತ್ತಿದ್ದೇವೆ ಅದಕೋಸ್ಕರ ಸಮಯ ಕೇಳಿದ್ದೇವೆ.

MR. SPEAKER:- It is afact that there is a direction from the Court?

ಶ್ರೀ ಹೆಚ್. ನಾಗಪ್ಪ:- ಹೌದು ಸಾರ್, ಹೈಕೋರ್ಟಿನ ಡೈರೆಕ್ಷನ್ ಇದೆ. ಅದರಂತೆ ನಾವು ಮಾಡುತ್ತೇವೆ.

MR. SPEAKER:- Then, you have to comply with the directions of the Court.

ಶ್ರೀ ಡಿ.ಆರ್. ಪಾಟೀಲ್:- ನೀವು 31-3-98ರ ಒಳಗೆ ಚುನಾವಣೆ ಮಾಡುತ್ತೇವೆ ಎನ್ನುವ ಭರವಸೆ ಹೌಸ್‌ನಲ್ಲಿ ಕೊಟ್ಟರೆ ಸಾಕು.

ಅಧ್ಯಕ್ಷರು:- ಪಾಟೀಲ್‌ರೆ, ನೀವು ಹೇಳಿದಾದ ನಂತರ ನಾನು ಅವರನ್ನು ಕೇಳಿದ್ದು ಇಷ್ಟೆ. ಕೋರ್ಟಿನಿಂದ ಈ ವಿಚಾರದಲ್ಲಿ ಡೈರೆಕ್ಷನ್ ಇರುವುದು ಸತ್ಯವೆ ಎಂದು ಕೇಳಿದ್ದಕ್ಕೆ ಅವರು ಹೌದು ಎಂದರು. ಕೋರ್ಟಿನಿಂದ ಡೈರೆಕ್ಷನ್ ಇದೆ ಎನ್ನುವಾಗ there is no way but to comply with it.

ಶ್ರೀ ಡಿ.ಆರ್. ಪಾಟೀಲ್:- ಕೋರ್ಟಿನ ಡೈರೆಕ್ಷನ್ ಇದ್ದ ಮೇಲೆ ಲಾ-ಡಿಪಾರ್ಟ್‌ಮೆಂಟ್ ಕೇಳುವ ಅವಶ್ಯಕತೆ ಏನು ಇದೆ?

(ಗೊಂದಲ)

ಶ್ರೀ ಹೆಚ್. ನಾಗಪ್ಪ:- ಒಂದು ವರ್ಷ ಲ್ಯಾಪ್ಸ್ ಆಗಿದೆ. ಇದರ ಬಗ್ಗೆ ನಾವು ಏನು ಮಾಡಬೇಕು ಎಂಬುದರ ಬಗ್ಗೆ ಲಾ-ಡಿಪಾರ್ಟ್‌ಮೆಂಟ್ ಜೊತೆಗೆ ವ್ಯವಹಾರ ಮಾಡುತ್ತಿದ್ದೇವೆ.

ಅಧ್ಯಕ್ಷರು:- ಆ ಪೀರಿಯಡ್ ಅನ್ನು ಎಕ್ಸ್‌ಟೆಂಡ್ ಮಾಡಬೇಕಾ?

ಶ್ರೀ ಹೆಚ್. ನಾಗಪ್ಪ:- ಆಫೀರಿಯಡ್ ಅನ್ನು ಮುಂದಕ್ಕೆ ಹಾಕಬೇಕೋ ಅಥವಾ ಅಷ್ಟಕ್ಕೆ ಸೀಮಿತವಾಗಬೇಕೋ ಎಂಬುದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:- ಆ ಪ್ರಶ್ನೆಗೆ ಬೇಕಾದರೆ you take time. But regarding holding election for President & Vice President, you commit that you will do it before 31st March.

ಶ್ರೀ ಹೆಚ್. ನಾಗಪ್ಪ:- ಹೈಕೋರ್ಟಿನ ಏನು ಆದೇಶ ಇದೆಯೋ ಅದರಂತೆ ನಾವು ಮಾಡುತ್ತೇವೆ ಎಂದು ಹೇಳುತ್ತಿದ್ದೇವೆ. ಹೈಕೋರ್ಟಿನ ಆದೇಶವನ್ನು ನಾವು ಪಾಲಿಸುತ್ತೇವೆಂದು ಹೇಳುತ್ತಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್:- ಮಾರ್ಚ್ 31ರ ಒಳಗೆ ಚುನಾವಣೆ ಮಾಡಿಸುತ್ತೇವೆ ಎನ್ನುವ ಮಾತು ಹೇಳಿ.

ಶ್ರೀ ಹೆಚ್. ನಾಗಪ್ಪ:- ಕೋರ್ಟಿನಲ್ಲಿ ನಾವು ಒಂದು ಅರ್ಜಿ ಹಾಕಿದ್ದೇವೆ. ಇದರ ಬಗ್ಗೆ ಸ್ವಲ್ಪ ಸಮಯ ಕೊಡಬೇಕೆಂದು ಕೇಳುತ್ತೇವೆ.

ಶ್ರೀ ಡಿ.ಆರ್. ಪಾಟೀಲ್:- ಕೋರ್ಟಿನಲ್ಲಿ ಪುನಃ ಅರ್ಜಿ ಹಾಕಿ they want to extend further. Why?

ಎಲೆಕ್ಟ್ ಆಗಿ 11 ತಿಂಗಳು ಖಾಲಿ ಕುಳಿತಿರುವಾಗ, ಇವರು ಪುನಃ ಕೋರ್ಟಿಗೆ ಹೋಗಿ ಎಕ್ಸ್‌ಟೆಂಡ್ ಮಾಡಿಸಿಕೊಂಡು ಬಂದರೆ ಹೇಗೆ?

ಅಧ್ಯಕ್ಷರು:- ಹೌದು. Is that the position?

SRI M.P. PRAKASH:- The point is this. There is some question of law involved. Whether the tenure of the members continues from the date of office or from the date of Notification. So, on that matter, they are seeking a clarification because for the last 11 months elections could not take place because continuously the mater was pending before the High Court. That has now been solved.

ಈಗ ಪ್ರಶ್ನೆ ಏನು ಬರುತ್ತದೆ ಎಂದರೆ, ಅವರ ಅವಧಿ ಏನಾಗಿದೆ, 11 ತಿಂಗಳ ಅವಧಿ ಇದು ಅವರಿಗೆ ಊರ್ಜಿತಗೊಳ್ಳುತ್ತದೆಯೋ, ಅಥವಾ ಅದು 11 ತಿಂಗಳು ಲ್ಯಾಪ್ಸ್ ಆಗಿದೆಯೋ ಎನ್ನತಕ್ಕದ್ದು ಬರುತ್ತದೆ. ಆ ದೃಷ್ಟಿಯಿಂದ ಕಾನೂನು ಇಲಾಖೆಯ ಸಲಹೆಯನ್ನು ಕೇಳಿದ್ದೇವೆ.

ಅಧ್ಯಕ್ಷರು:- ಮಾನ್ಯ ಡಿ.ಆರ್. ಪಾಟೀಲರು ಏನು ಹೇಳುತ್ತಾರೆ ಎಂದರೆ, ಅವರ ಕಂಟೆನ್‌ಷನ್ ಇಷ್ಟೆ. ನೀವು ಎಲೆಕ್ಷನ್ ಮಾಡಿ - to the office of the President and Vice-President. ಅಮೇಲೆ you get this matter examined in detail by the Law Department. If need be, you approach the Court.

ಅಗ್ರೀವ್ಡ್ ಪಾರ್ಟೀಸ್ ಯಾರು ಇರುತ್ತಾರೆ, ಅವರೂ ಕೋರ್ಟಿಗೆ ಹೋಗಲಿ. to settle this particular issue ನೀವು ಹೇಳಿದ್ದು. whether from the date of Notification, tennur/count ಆಗಬೇಕಾ ಅಥವಾ from the date of assuming office ಎನ್ನುವುದು ಅಮೇಲೆ ಇತ್ಯರ್ಥವಾಗಲಿ. ಈಗ ಎಲೆಕ್ಷನ್ ಆಗುವುದು ಆಗಿ ಹೋಗಲಿ ಅಂತ ಅವರು ಹೇಳುವುದು. ಇದರಲ್ಲಿ ಏನೂ ಪ್ರತಿಷ್ಠೆಯ ವಿಚಾರ ಇಲ್ಲ. It will be fail enough. It is a very reasonable demand.

ಶ್ರೀ ಹೆಚ್. ನಾಗಪ್ಪ:- ಪ್ರತಿಷ್ಠೆ ವಿಚಾರ ಇಲ್ಲ. ಇದನ್ನು ಮಾಡುತ್ತೇವೆ. ಹೈಕೋರ್ಟ್ ಡೈರೆಕ್ಷನ್ ಏನಿದೆ, ಅದನ್ನು ಪಾಲಿಸುತ್ತೇವೆ.

ಅಧ್ಯಕ್ಷರು:- ವೆರಿಗುಡ್.

ಮಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುವ ಖಾಸಗಿ ಬಸ್ಸುಗಳ ದರ

54 (210) ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುವ ಖಾಸಗಿ ಬಸ್ಸುಗಳಿಗೆ ಕನಿಷ್ಟ ದರವನ್ನು ಯಾವ ಆಧಾರದಲ್ಲಿ ನಿಗದಿಪಡಿಸಲಾಗಿದೆ;

ಆ) ದಕ್ಷಿಣ ಕನ್ನಡ ಜಿಲ್ಲೆಯ ಸಾರಿಗೆ ಸಂಸ್ಥೆಯವರು ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ದರ ವಸೂಲು ಮಾಡುವ ಬಗ್ಗೆ ದೂರುಗಳು ಬಂದಿವೆಯೇ? ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು)

ಅ) ಸರ್ಕಾರಿ ಅಧಿಸೂಚನೆ ಸಂಖ್ಯೆ:ಹೆಚ್‌ಟಿಡಿ 91 ಟಿಎಂಎ 96, ದಿನಾಂಕ:14-11-1996 ರನ್ವಯ ಮಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸುವ ಖಾಸಗೀ ಬಸ್ಸುಗಳ ಕನಿಷ್ಟ ದರವನ್ನು ನಿಗದಿಪಡಿಸಲಾಗಿದೆ.